## ಜಾನಪದ ಜಾದೂಗಾರ

# ಹುಕ್ಕೇರಿ ಬಾಳಪ್ಪ




**ಬಾಳಪ್ಪನವರು ಹಾಡುವ ವೈಖರಿಯಲ್ಲಿ ವಿಶಿಷ್ಟ ಆಪ್ತತೆಯಿತ್ತು. ಸ್ವಾತಂತ್ರ್ಯದ ಆಶಯಗಳನ್ನೂ, ಸಾಹಿತ್ಯ, ಸಂಸ್ಕೃತಿಯ ಗಂಧವನ್ನೂ ಹಾಡುಗಳಲ್ಲಿ ದಾಟಿಸಿದ ಅಪರೂಪದ ಗಾಯಕರವರು.**

■ **ಜಗನ್ನಾಥ ಪ್ರಕಾಶ್ ಎನ್‌**

ವ್ಯವಸಾಯ, ವ್ಯಾಪಾರ ಮಾಡುವ ಕುಟುಂಬದಲ್ಲಿ ಜನಿಸಿದ ಬಾಳಪ್ಪ ಶಾಲಾ ದಿನಗಳಲ್ಲೇ ಜನಪದ ಗೀತೆಗಳನ್ನು ಕಲಿತು ತಮ್ಮದೇ ಧಾಟಿಯಲ್ಲಿ ಹಾಡಿ ಎಲ್ಲರಿಂದಲೂ ಸೈ ಎನ್ನಿಸಿಕೊಂಡವರು.

ಓದಿನ ಜತೆಗೆ ಹಾಡನ್ನು ಹೆಚ್ಚು ಹಚ್ಚಿಕೊಂಡ ಬಾಲಕನಿಗೆ ಕನ್ನಡ ಜನಪದ ಗೀತೆಗಳಲ್ಲಿ ಹೆಚ್ಚಿನ ಆಸಕ್ತಿ. ಶಾಸ್ತ್ರೀಯವಾಗಿ ಅವರೇನು ಕಲಿಯಲಿಲ್ಲವಾದರೂ, ಅವರ ಹಾಡಿಗೆ ಎಲ್ಲೆಡೆ ಮನ್ನಣೆ ಸಿಗಲು ಯಾವ ಅಡ್ಡಿ ಆತಂಕಗಳೂ ಬರಲಿಲ್ಲ. ಮನೆ–ಶಾಲೆಗಳಲ್ಲಿ ಮೊದಮೊದಲಿಗೆ ಹಾಡುತ್ತಿದ್ದ ಬಾಳಪ್ಪ ನಂತರ ಸಾರ್ವಜನಿಕವಾಗಿಯೂ ಹಾಡಲು ಶುರುವಿಟ್ಟುಕೊಂಡು, ಆಸುಪಾಸಿನ ಹಳ್ಳಿಗಳಲ್ಲಿ ಹೆಸರಾದರು. ಕಲಿತ ಹಾಡುಗಳೊಂದಿಗೆ ತಾವೇ ರಚಿಸಿದ ಹಾಡುಗಳಿಗೂ ಕೊರಳಾದ ಅವರು ಭಕ್ತಿಗೀತೆ, ಭಾವಗೀತೆ, ಲಾವಣಿ ಹಾಡುವುದರಲ್ಲೂ ಯಶ ಕಂಡರು.

ಆಗ ದೇಶದ ತುಂಬೆಲ್ಲ ಸ್ವಾತಂತ್ರ್ಯ ಹೋರಾಟದ ಕಾವು. ಜನರ ನಡುವೆ ಇದ್ದು ತಮ್ಮ ಹಾಡು–ಲಾವಣಿಗಳಿಂದ ಸ್ವಾತಂತ್ರ್ಯ ಸಂದೇಶವನ್ನು ಹರಡತೊಡಗಿದ ಬಾಳಪ್ಪ ಬ್ರಿಟಿಷರ ಕಣ್ಣಿಗೆ ಬಿದ್ದು ಜೈಲುಶಿಕ್ಷೆ ಅನುಭವಿಸುವಂತಾಯಿತು. ಸೆರೆವಾಸದಿಂದ ಹೊರಬಂದವರು ಸುಮ್ಮನಿರಲಿಲ್ಲ. ತಾವೇ ಸಂಗೀತ ನಾಟಕ ಮಂಡಲಿ ಸ್ಥಾಪಿಸಿ ನಾಟಕದ ಹಾಡುಗಳಲ್ಲಿ ಸ್ವಾತಂತ್ರ್ಯದ ತಿಳಿವಳಿಕೆಗೆ ಮೊದಲಿಟ್ಟುಕೊಂಡರು.

ರಂಗಭೂಮಿಯಲ್ಲಿ ಗಾಯನ ಪ್ರಧಾನವಾದ ನಾಟಕಗಳನ್ನು ಆಡುತ್ತಿದ್ದ ಗೀತಗಳಲ್ಲಿ ಸ್ವಾತಂತ್ರ್ಯದ ಕೆಚ್ಚಿನ ಅಂಶಗಳನ್ನು ಅಳವಡಿಸಿ ನೋಡುಗರಿಗೆ ದಾಟಿಸುತ್ತಿದ್ದರು. ಆಕಾಶವಾಣಿ ಕೇಂದ್ರಗಳಲ್ಲಿ ಕಾರ್ಯಕ್ರಮಗಳನ್ನು ನೀಡುತ್ತಿದ್ದ ಬಾಳಪ್ಪ ಅವರಿಂದ ಎಚ್‌.ಎಂ.ವಿ. ಸಂಸ್ಥೆ ಹಾಡುಗಳನ್ನು ಹಾಡಿಸಿ ರೆಕಾರ್ಡುಗಳನ್ನು ಬಿಡುಗಡೆ ಮಾಡುತ್ತಿತ್ತು. ಮೈಸೂರು ದಸರಾ ದರ್ಬಾರ್‌ನಲ್ಲೂ ಹಾಡಿದ್ದ ಬಾಳಪ್ಪ ಹುಕ್ಕೇರಿ, ಸ್ವಾತಂತ್ರ್ಯಾನಂತರ ಸರ್ಕಾರದ ಯೋಜನೆ–ಕಾರ್ಯಕ್ರಮಗಳನ್ನು ಹಾಡುಗಳ ಮುಖೇನ ಜನಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದರು. ಬಳಿಕ ಕೃಷಿ ಇಲಾಖೆಯಲ್ಲಿ ಕ್ಷೇತ್ರ ಪರಿಚಾರಕರಾಗಿ ಉದ್ಯೋಗಕ್ಕೆ ಸೇರಿಕೊಂಡರು.

ವ್ಯವಸಾಯದ ಬಗೆಗೆ ಮಾಹಿತಿಪೂರ್ಣ ವಿವರಗಳನ್ನು ಆಕರ್ಷಕ ಹಾಡುಗಳ ಮೂಲಕ ಹಳ್ಳಿಗಳಿಗೆ ತಲುಪಿಸಿ ಜನರಿಗೆ ಮನವರಿಕೆ ಮಾಡಿಕೊಟ್ಟ ಅವರು, ಯುವ ಸಮೂಹಕ್ಕೆ ಗಾಯನದಲ್ಲಿ ಆಸಕ್ತಿ ಹುಟ್ಟಿಸುವಲ್ಲಿ ಶ್ರಮಿಸಿದರು. ಯಾವುದೇ ವಿಷಯವಾದರೂ ರಸವತ್ತಾದ ಸಾಹಿತ್ಯ ಬರೆದು ತಮ್ಮ ಕಂಚು ಕಂಠದಿಂದ ಹೊರಹೊಮ್ಮಿಸುವಲ್ಲಿ ಯಶ ಕಂಡರು. ಗೀತಗಾಯನದಲ್ಲಿ ತಮ್ಮದೇ ಶೈಲಿಯನ್ನು ಹುಟ್ಟುಹಾಕಿದ್ದರು. ತಮ್ಮ ಗೀತೆಗಳಿಗೆ ತಾವೇ ರಾಗ ಸಂಯೋಜನೆ ಮಾಡಿ ಹಾಡುತ್ತಿದ್ದ ಬಾಳಪ್ಪ ಬರೆದ ಗೀತೆಗಳು ಕೃತಿಗಳಾಗಿಯೂ ಹೊರಬಂದಿವೆ.

ತಾಸುಗಟ್ಟಲೆ ನಿರರ್ಗಳ ಮಾತಿನೊಂದಿಗೆ ಹಾಡುಗಳನ್ನು ಉಣಬಡಿಸುತ್ತಿದ್ದ ಬಾಳಪ್ಪ ಅವರದ್ದು ಸಮಯಸ್ಫೂರ್ತಿಯಿಂದ ಹಾಡುವುದರಲ್ಲೂ ಎತ್ತಿದ ಕೈ. ಹಾಡು–ಮಾತಿನ ಜತೆಗೆ ಹಾಸ್ಯ ರಸಾಯನವನ್ನು ಕೇಳುಗರಿಗೆ ಉಣಿಸುತ್ತಿದ್ದರು. ಹೆಸರಾಂತ ಕವಿಗಳ ಹಾಡುಗಳಿಗೆ ರಾಗ ಸಂಯೋಜನೆ ಮಾಡುವುದರೊಂದಿಗೆ ತಮ್ಮದೇ ಸಾಹಿತ್ಯಕ್ಕೂ ಸಂಗೀತದ ವಿಶೇಷ ಮೆರುಗು ತರುವುದು ಬಾಳಪ್ಪನವರಿಗೆ ಕರಗತವಾಗಿತ್ತು. ‘ಜಾನಪದ ಜಾದೂಗಾರ’ ಎನ್ನಿಸಿಕೊಂಡಿದ್ದ ಅವರು, ಕನ್ನಡ, ಹಿಂದಿ, ಮರಾಠಿ ಭಾಷೆಗಳಲ್ಲಿ ಹಾಡುವುದರಲ್ಲಿ ನೈಪುಣ್ಯ ಗಳಿಸಿದ್ದರು. ರಾಷ್ಟ್ರಪತಿಗಳು, ಪ್ರಧಾನಿಗಳೊಂದಿಗೆ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಗಾಯನದಿಂದ ಅವರು ತಲೆದೂಗುವಂತೆ ಮಾಡಿದ್ದು ಬಾಳಪ್ಪನವರ ಹೆಗ್ಗಳಿಕೆ.

ಆಕಾಶವಾಣಿಯೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದು, ದೂರದರ್ಶನದಲ್ಲೂ ಜನಪ್ರಿಯರಾದರು. ಕೇಂದ್ರ ಸಂಗೀತ ನಾಟಕ ಅಕಾಡೆಮಿ, ಮಧ್ಯಪ್ರದೇಶ ಸರ್ಕಾರದ ತುಳಸಿ ಸನ್ಮಾನ ಸೇರಿದಂತೆ ಅನೇಕ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳಿಗೆ ಪಾತ್ರರಾಗಿದ್ದ ಅವರು, ಸ್ವಾತಂತ್ರ್ಯ ಚಳವಳಿಯಲ್ಲಿ ಹಾಡಿ ಆರು ತಿಂಗಳು ಸೆರೆವಾಸ ಅನುಭವಿಸಿದ್ದರು. ಕೃಷಿ ಇಲಾಖೆ, ಆರೋಗ್ಯ ಕುಟುಂಬ ಇಲಾಖೆ ಮೊದಲಾದ ಸರ್ಕಾರಿ ಸಂಸ್ಥೆಗಳ ಯೋಜನೆಗಳನ್ನು ಪ್ರಚಾರ ಮಾಡಿ ಹಳ್ಳಿಗರ ಮನಮುಟ್ಟುವಂತೆ ಹೇಳುವ ಗಾಯನ ವೈಖರಿ ಅವರದ್ದಾಗಿತ್ತು.

‘ಸಾವಿರ ಹಾಡಿನ ಸರದಾರ’ ಎಂದು ಜನಪ್ರೀತಿಯಿಂದ ಕರೆಸಿಕೊಳ್ಳುತ್ತಿದ್ದ ಬಾಳಪ್ಪ ಹುಕ್ಕೇರಿ ಜನಪದ ಗೀತೆಗಳನ್ನು ಅದ್ಭುತವಾಗಿ ಹಾಡಿ ಪ್ರಸಿದ್ಧರಾದರಲ್ಲದೆ– ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ಜನರಿಗೆ ತಲುಪಿಸಿದ ಜನಪ್ರಿಯ ಗಾಯಕರಾಗಿದ್ದರು.

ಪ್ರತಿಕ್ರಿಯಿಸಿ: feedback@sudha.co.in